





ಓಡಾಡುವಾಗಲೇ ತಾಪಮಾನದ ಚಳಿಯನ್ನು ಇಲ್ಲಿನ ವಾತಾವರಣದ ಬಿಸಿ ಮಣಿಸುತ್ತಿದ್ದುದನ್ನು ಅನುಭವಿಸುತ್ತಿದ್ದೆವು.

ಮಿಲಿಯಗಟ್ಟಳೆ ವರ್ಷಗಳ ಹಿಂದೆ ಇಲ್ಲಿ ಸಿಡಿದೆದ್ದ ಜ್ವಾಲಾಮುಖಿಗಳು, ಭೂಕಂಪಗಳಿಂದಲೇ ಈ ಭೂಭಾಗ ಇಷ್ಟು ವರ್ಣಮಯವಾಗಿ, ವಿಸ್ಮಯವಾಗಿ ರೂಪುಗೊಂಡಿದೆ. ನೆಲದಾಳದ ಗಂಧಕದ ಪರಿಣಾಮದಿಂದ ತುಂಬಿಕೊಂಡ ನೀರಿನ ಹಬೆ ಕೆಲವರಿಗೆ ಒಂದು ಕನಸಿನ ಲೋಕದಂತೆ ಕಂಡರೆ, ಭೂಗರ್ಭಶಾಸ್ತ್ರಜ್ಞರಿಗೆ ಇದರ ಮೂಲ ಕಂಡುಹಿಡಿಯುವ ಜ್ಞಾನದಾಹ. ಅದಕ್ಕೇ ಇದರ ತಳಬುಡ ಶೋಧಿಸಿ, 'ಇಲ್ಲಿ ಇನ್ನೂ ಉಸಿರಾಡುತ್ತಿರುವ ಅಗ್ನಿಪರ್ವತಗಳಿವೆ. ಎಂದಾದರೂ ಅವು ತಮ್ಮ ಅಸಹನೆಯನ್ನು ಕಕ್ಕಿಬಿಡಬಹುದು' ಎನ್ನುತ್ತಾರೆ. ಇದನ್ನು ಕೇಳಿ ಚೂರು ಕೈಕಾಲು ಕಂಪಿಸಿದರೂ, ಈ ಕ್ಷಣದ ಈ ಪ್ರಾಕೃತಿಕ ಸೌಂದರ್ಯದ ಸೆಳೆತ ಸೀಮಾತೀತ. 'ಅಯ್ಯೋ, ಮುಂದೆಂದಾದರೂ ಘಟಿಸಬಹುದಾದ ವಿಕೋಪಕ್ಕೆ ಈಗೇಕೆ ತಲ್ಲಣ' ಎಂದು ಮನಸ್ಸು ನಿರ್ಭೀತವಾಗಿತ್ತು. ಪ್ರಕೃತಿಯ ವಿಸ್ಮಯವನ್ನು ನೋಡುತ್ತಾ ಮೈಮರೆತಿತ್ತು.

ಪ್ರಕೃತಿಯ ನಿಗೂಢಗಳು ಮನುಷ್ಯನನ್ನು ಎಂದಿಗೂ ಪ್ರಶ್ನಾರ್ಥಕವಾಗಿಯೇ ಇಟ್ಟುಬಿಡುತ್ತವೆ. ಇದುವರೆಗೆ ಕಂಡ 'ಗ್ರಾಂಟ್ ವಿಲೇಜ್'ಭಾಗದ ಭೂವೈವಿಧ್ಯದ ಮುಂದುವರಿಕೆಯಾಗಿ ಮುಂದೆ ಹೋಗಿದ್ದು, 'ವೆಸ್ಟ್ ಥಂಬ್ ಗೀಸರ್ ಬೇಸಿನ್' ಮತ್ತು 'ಯೆಲ್ಲೋ ಸ್ಟೋನ್ ಸರೋವರ'ದ ಭಾಗಗಳಿಗೆ. ಅದು ಮತ್ತೂ